ದಿನಾಂಕ ಃ- 27-07-2023 ಓ ಎಸ ನಂ 12/2019

ಡಿ.ಡಬ್ಲ್ಯು– 1

<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ</u>

ನ್ಯಾಯಾಲಯಕ್ಕೆ ಸಲ್ಲಿಸಲು ಅಧಿಕಾರ ಪತ್ರ ಇಂಗ್ಲೀಷ ಭಾಷೆಯಲ್ಲಿ ಇರಬೇಕು ಎಂದು ಹೇಳುವಂತೆ ನಾವು ಬೆಳಗಾವಿಯ ವಕೀಲರಿಗೆ ಹೇಳಿದ್ದೇವು ಎಂದರೆ ಸರಿಯಲ್ಲ. ಅಧಿಕಾರಿ ಪತ್ರದಲ್ಲಿ ಖರೀದಿಗೆ ಕೊಡುವ ಅಧಿಕಾರವನ್ನು ನೀಡಿರುವ ಕಾರಣ ಆ ವಿಚಾರ ಕಿತ್ತೂರಿನಲ್ಲಿ ವಕೀಲರಿಗೆ ಗೊತ್ತಾದರೆ ವಾದಿಗೆ ಗೊತ್ತಾಗುತ್ತದೆ ಎಂದು ನಾನು ಆ ವಿಚಾರವನ್ನು ಮರೆಮಾಚುವ ಉದ್ದೇಶದಿಂದ ಬೆಳಗಾವಿಯ ವಕೀಲರ ಬಳಿ ವಾದಿಯನ್ನು ಕರೆದುಕೊಂಡು ಹೋಗಿರುವೆನು ಎಂದರೆ ಸರಿಯಲ್ಲ. ಅಧಿಕಾರ ಪತ್ರ ಆಗುವ ಕಾಲಕ್ಕೆ ನಮಗೆ ಪರಿಚಯ ಇದ್ದ ಸಿದ್ದಪ್ಪ ಎಂಬ ವ್ಯಕ್ತಿ ಇದ್ದರು . ಆತ ಬೆಳಗಾವಿಯ ನಿವಾಸಿ ಎಂದರೆ ಸರಿ . ಆತ ನನಗೆ ಚಿಕ್ಕಪ್ಪನ ಮಗನಾಗಬೇಕು ಎಂದರೆ ಸರಿ . ಬೆಳಗಾವಿಯಲ್ಲಿ ಅವರು ಸ್ವಂತ ಉದ್ಯೋಗ ಮಾಡುವರು . ಅವರಿಗೂ ನಮಗೂ ಒಳ್ಳೆಯ ಸಂಬಂಧ ಇದೆ ಎಂದರೆ ಸರಿಯಲ್ಲ. ನಾನು ಸಂಗನಗೌಡ ಹಾಗೂ ಸಿದ್ದಪ್ಪ ಸೇರಿಕೊಂಡು ವಾದಿಯರಿಗೆ ಮೋಸ ಮಾಡುವ ಸಲುವಾಗಿ ಅಧಿಕಾರ ಪತ್ರವನ್ನು ಇಂಗ್ಲೀಷನಲ್ಲಿ ಬರೆಸಿದ್ದೇವೆ ಎಂದರೆ ಸರಿಯಲ್ಲ. ಬರೆಸುವ ಕಾಲಕ್ಕೆ ನ್ಯಾಯಾಲಯಕ್ಕೆ ಸಲ್ಲಿಸಲು ಅಧಿಕಾರ ಪತ್ರವು ಇಂಗ್ಲೀಷನಲ್ಲಿ ಇರಬೇಕು ಎಂದು ವಾದಿಯರಿಗೆ ಸುಳ್ಳು ಮಾಹಿತಿ ನೀಡಿದ್ದೇವೆ ಎಂದರೆ ಸರಿಯಲ್ಲ. ವಾದಿಯರಿಗೆ ಬೆಳಗಾವಿಯ ವಕೀಲರಾದ ಸಿ ಆರ ನಾಯಕ ಹಾಗೂ ಎಂ ಟಿ ಪಾಟೀಲ ಇವರ ಪರಿಚಯ ಇರಲಿಲ್ಲ ಎಂದರೆ ಸರಿಯಲ್ಲ. ನನಗೂ ಹಾಗೂ ನಮ್ಮ ಸಂಬಂಧಿ ಸಿದ್ದಪ್ಪ ಹೊಸಮನಿ ಇವರಿಗೆ ಬೆಳಗಾವಿ ವಕೀಲರ ಪರಿಚಯ ಇದ್ದ ಕಾರಣ ನಾವೇ ಮುತುವರ್ಜಿ ವಹಿಸಿ ಅಧಿಕಾರ ಪತ್ರವನ್ನು ಬರೆಸಿದ್ದೇವೆ ಮತ್ತು ವಾದಿಯ ಉದ್ದೇಶಕ್ಕೆ ವಿರುದ್ಧವಾಗಿ ಅದರಲ್ಲಿ ಖರೀದಿ ಮಾಡುವ ಅಧಿಕಾರವನ್ನೂ ಕೂಡ ನಾನು ಸುಳ್ಳಾಗಿ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ.

ಯಮನಪ್ಪ ಮತ್ತು ಬಾಳವ್ವ ನನ್ನ ಬಳಿ ಸದರಿ ಅವರಿಗೆ ರೂ. 2,10,000/- ದಷ್ಟು ಹಣದ ಅಡಚಣೆ ಇರುವ ಕಾರಣ ಜಮೀನನ್ನು ಮಾರಾಟ ಮಾಡುವಂತೆ ನನಗೆ ಹೇಳಿದ್ದರು . ಯಾವ ರೀತಿಯ ಹಣದ ಅಡಚಣೆ ಎಂದು ನನಗೆ ಗೊತ್ತಿರುವುದಿಲ್ಲ. ಅವರು ಯಾವ ದಿನಾಂಕದಂದು, ಯಾವ ತಿಂಗಳು ಮತ್ತು ಯಾವ ವರ್ಷ ನನ್ನ ಬಳಿ ಹಣದ ಅಡಚಣೆ ಬಗ್ಗೆ ಹೇಳಿದರು ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಆಸ್ತಿಯನ್ನು ಖರೀದಿಗೆ ತೆಗೆದುಕೊಳ್ಳಲು ಸುತ್ತಮುತ್ತಲಿನ ಹಳ್ಳಿ ಜನರು ತುಂಬಾ ಬಂದಿದ್ದರು . ನನಗೆ ಅವರ ಹೆಸರು ಹೇಳಲಾಗುವುದಿಲ್ಲ. ಅವರಿಗೆ ನಾನು ರೂ. 2,50,000 /- ಹಣವನ್ನು 04 ಎಕರೆಗೆ 11 ಗುಂಟೆಗೆ ಕೇಳಿದೆನು. ಅದರಲ್ಲಿ ಒಟ್ಟು ಆಸ್ತಿ 10 ಎಕರೆ 23

ಗುಂಟೆ ಇತ್ತು. ಸದರಿ ಒಟ್ಟು 10 ಎಕರೆ 23 ಗುಂಟೆ ಆಸ್ತಿ ವಾದಿಯರ ಹೆಸರಿನಲ್ಲಿಯೇ ಇತ್ತು. ಆಗ ಸಿದ್ದವ್ವನ ಹೆಸರು ಇರಲಿಲ್ಲ ಎಂದರೆ ಸರಿ. ಅಧಿಕಾರ ಪತ್ರ ಮಾಡಿಕೊಳ್ಳುವ ಕಾಲಕ್ಕೆ ಸಿದ್ದವ್ವಳ ಹೆಸರು 10 ಎಕರೆ 23 ಗುಂಟೇ ಜಮೀನಿನ ದಾಖಲೆಗಳಲ್ಲಿ ಇರಲಿಲ್ಲ. ಆ ಸಮಯದಲ್ಲೂ ಕೂಡ ಕೇವಲ ವಾದಿಯರ ಹೆಸರಿನಲ್ಲಿತ್ತು. ಆ ಸಮಯದಲ್ಲಿ ಸದರಿ ಆಸ್ತಿ ಕೇವಲ ವಾದಿಯರ ಹೆಸರಿನಲ್ಲಿ ಮಾತ್ರ ಇತ್ತು ಎಂದು ತೋರಿಸಲು ನಾನು ಯಾವುದೇ ಕಾಗದ ಪತ್ರ ಹಾಜರುಪಡಿಸಿರುವುದಿಲ್ಲ. ನನಗೆ ಅಧಿಕಾರ ಪತ್ರ ಕೊಡುವ ಮೊದಲು ಸದರಿ ಆಸ್ತಿಯಲ್ಲಿ ನನಗೆ ಹಿಸ್ಸೆ ಇತ್ತು ಎಂದು ದಾವೆ ಮಾಡಿದ್ದಳು ಎಂದರೆ ಸರಿಯಲ್ಲ. ಸದರಿ ಕೇಸನ್ನು ನಡೆಸಲು ನನಗೆ ಬಾಳವ್ವ ಹಾಗೂ ವಾದಿಯರು ನೀಡಿದ ಅಧಿಕಾರ ಪತ್ರವನ್ನು ದುರುಪಯೋಗಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು 04 ಎಕರೆ 11 ಗುಂಟೆ ಜಮೀನನ್ನು ಮಾತ್ರ ಮಾರಾಟ ವಾದಿಯರು ಹಾಗೂ ಬಾಳವ್ವನಿಂದ ಅಧಿಕಾರ ಪತ್ರವನ್ನು ಪಡೆದುಕೊಂಡಿದ್ದೇನೆ. ಸದರಿ ಅಧಿಕಾರ ಪತ್ರವನ್ನು ನಾನು ಬಾಳವ್ವ ಹಾಗೂ ವಾದಿಯರಿಗೆ ಮೋಸ ಮಾಡಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಮಾರಾಟ ಮಾಡುವ ಅಧಿಕಾರವನ್ನು ಮಾಡುವ ಉದ್ದೇಶ ವಾದಿಯರಿಗೆ ಯಾವತ್ತೂ ಇರಲಿಲ್ಲ ಎಂದರೆ ಸರಿಯಲ್ಲ. ಅಧಿಕಾರ ಪತ್ರ ತೆಗೆದುಕೊಳ್ಳುವ ಕಾಲಕ್ಕೆ ದಾವಾ ಸ್ವತ್ತಿನ ದಾಖಲೆಗಳಲ್ಲಿ ಸಿದ್ದವ್ವನ ಹೆಸರು ಕೂಡ ಇತ್ತು ಎಂದರೆ ಸರಿಯಲ್ಲ. ಉದ್ದೇಶಪೂರ್ವಕವಾಗಿ ಆಕೆಯನ್ನು ಅಧಿಕಾರ ಪತ್ರದಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ಆ ಕಾಲಕ್ಕೆ 01 ಎಕರೆಗೆ 5 ರಿಂದ 10 ಲಕ್ಷದವರೆಗೆ ಕಿಮ್ಮತ್ತು ಇತ್ತು ಎಂದರೆ ಸರಿಯಲ್ಲ. ಮಾರಿಹಾಳ ಸೌಕಾರ ಇವರು ದಾವಾ ಸ್ವತ್ತನ್ನು ಖರೀದಿ ಮಾಡುವ ಕಾಲಕ್ಕೆ ದಾವಾ ಸ್ವತ್ತಿನ ದಾಖಲೆಗಳಲ್ಲಿ ಸಿದ್ದವ್ವಳ ಹೆಸರು ಇತ್ತು, ಅಧಿಕಾರ ಪತ್ರ ಪಡೆದುಕೊಂಡ 1 ವರ್ಷದ ನಂತರ ನಾನು ಖರೀದಿಗೆ ಕೊಟ್ಟಿದ್ದೇನೆ. ಖರೀದಿ ಪತ್ರ ಬರೆದುಕೊಟ್ಟ ನಂತರ 2 – 3 ತಿಂಗಳು ಸಿದ್ದವ್ವಳ ಹೆಸರು ದಾವಾ ಸ್ವತ್ತಿನ ದಾಖಲೆಗಳಲ್ಲಿ ಬಂದಿರುತ್ತದೆ . ನ್ಯಾಯಾಲಯದ ಡಿಕ್ರಿ ಆದಾರದ ಮೇಲೆ ಸಿದ್ದವ್ವಳ ಹೆಸರು ದಾವಾ ಸ್ವತ್ತಿನ ದಾಖಲೆಗಳಲ್ಲಿ ಬಂದಿತ್ತು. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಕಾಲಕ್ಕೆ ಕೇಸು ನಡೆದಿತ್ತು ಎಂದರೆ ಸರಿಯಲ್ಲ. ಖರೀದಿ ಕಾಲಕ್ಕ ನನಗಾಗಲಿ ಅಥವಾ ಖರೀದಿಗೆ ತೆಗದುಕೊಂಡವರಾಗಲಿ ಸಿದ್ದವಳ ಸಹಿಯನ್ನು ಪಡೆದುಕೊಳ್ಳುವ ಬಗ್ಗೆ ಯೋಚನೆ ಮಾಡಿರುವುದಿಲ್ಲ. ಸಾಕ್ಷಿ ಸ್ವತಃ ಹೇಳುವುದೇನೆಂದರೆ ಆಕೆಯನ್ನು ಸಂಪರ್ಕ ಮಾಡಿದ್ದೆವು ಆದರೆ ಆಕೆ ತನ್ನ 05 ಎಕರೆ ಬಿಟ್ಟು ಇನ್ನುಳಿದ ಜಮೀನಿನಲ್ಲಿ ಬೇಕಾದ್ದನ್ನು ಮಾಡಿಕೊಳ್ಳಿರಿ ಎಂದು ನಮಗೆ ಹೇಳಿರುವಳು. ಆ ಸಮಯದಲ್ಲಿ ಆಕೆಯ ಹೆಸರಿನಲ್ಲಿ 05 ಎಕರೆ ಜಮೀನು ಇತ್ತು ತೋರಿಸಲು ನಾನು ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಖರೀದಿ ಆಗುವ ಕಾಲಕ್ಕೆ ಆಕೆಗೆ 10 ಎಕರೆ ಮೇಲೆ ಹಕ್ಕು ಇದೆಯೊ ಅಥವಾ 05 ಎಕರೆ ಮೇಲೆ ಮಾತ್ರ ಆಕೆಗೆ ಹಕ್ಕು ಇದೆಯೋ ಎಂದು ನ್ಯಾಯಾಲಯದ ತೀರ್ಪು

ಬಂದಿರಲಿಲ್ಲ ಎಂದರೆ ಸರಿ. ಆ ಕಾಲಕ್ಕೆ ಸದರಿ ಅಖಂಡ 10 ಎಕರೆಗೆ ಸಂಬಂಧಿಸಿದಂತೆ ಸಿದ್ದವ್ವ ಹಾಗೂ ಇತರರ ನಡುವೆ ವಾಟ್ನಿ ಕೂಡ ಆಗಿರಲಿಲ್ಲ ಎಂದರೆ ಸರಿ . ಮಾರಿಹಾಳ ಸೌಕಾರರಿಗೆ ಆ ಎಲ್ಲಾ ವಿಚಾರಗಳು ಗೊತ್ತಿದ್ದವು ಎಂದರೆ ಸರಿ. ಈ ಎಲ್ಲ ವಿಚಾರಗಳು ನಮ್ಮ ಗಮನದಲ್ಲಿ ಇದ್ದರೂ ಕೂಡ 2 ನೇ ಪ್ರತಿವಾದಿಯ ಸಹೋದರ ಶಾಸಕರಾಗಿದ್ದ ಕಾರಣ ಸುಳ್ಳಾಗಿ ಅಧಿಕಾರ ಪತ್ರವನ್ನು ಸೃಷ್ಟಿಸಿಕೊಂಡು ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಖರೀದಿ ಪತ್ರ ಕಾನೂನು ಬಾಹಿರವಾಗಿರುತ್ತದೆ ಎಂದರೆ ಸರಿಯಲ್ಲ. ಖರೀದಿಯ ಬಗ್ಗೆ ಮಾತನಾಡಲು ಮಾರಿಹಾಳ ಸೌಕಾರರ ಕಡೆಯಿಂದ ಲೆಕ್ಕವಿಲ್ಲದಷ್ಟು ಜನರು ಬಂದಿದ್ದರು. ಮಾತುಕತೆ ನಡೆದು 15 ದಿನಗಳ ನಂತರ ಖರೀದಿ ವ್ಯವಹಾರ ಆಗಿರುತ್ತದೆ, ಆ ಬಗ್ಗೆ ಖರೀದಿಯ ಬಗ್ಗೆ ಯಾವುದೇ ಸಂಚಗಾರ ಆಗಿರಲಿಲ್ಲ. ಮಾತುಕತೆ ಕಾಲಕ್ಕೆ ವಾದಿಯರು ಎಲ್ಲರೂ ಹಾಜರು ಇದ್ದರು. ಮಾತುಕತೆಯು ವಾದಿಯರ ಸಮಕ್ಷಮ ಆಗಿರುತ್ತದೆ.

ಮುಂದುವರೆದ ಪಾಟೀ ಸವಾಲುಃ ಸಮಯ ಕೋರಿದ ಕಾರಣ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

ಪ್ರ.ದಿ.ನ್ಯಾ ಮತ್ತು ಪ್ರ.ದ.ನ್ಯಾದಂ.ನ್ಯಾಬೈಲಹೊಂಗಲ